ಸಿ.ಸಿ.1792/2024 ಪಿಡಬ್ಲ್ಯೂ-1

ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ನಾನು ಮೂಡಿಗೆರೆಯ ಲೋಕವಳ್ಳಿ ವಾಸಿ. ಆರೋಪಿಯು ಕೊಟ್ಟಿಗೆಹಾರದ ವಾಸಿ. ನನ್ನ ವಕೀಲರ ಮೂಲಕ ಕಳುಹಿಸಿರುವ ನೋಟೀಸನ್ನು ಆರೋಪಿಯ ಕೊಟ್ಟಿಗೆಹಾರ ವಿಳಾಸಕ್ಕೆ ಕಳುಹಿಸಲಾಗಿದೆ. ಆರೋಪಿಯ ಗಂಡನ ಹೆಸರು ನನಗೆ ನೆನಪಿಲ್ಲ. ವಕೀಲರ ನೋಟೀಸು ಮತ್ತು ಪಿರ್ಯಾದಿನಲ್ಲಿ ಆರೋಪಿಯ ಗಂಡನ ಹೆಸರು ಬರೆದಿರುವ ಬಗ್ಗೆ ನನಗೆ ನೆನಪಿಲ್ಲ. ಆರೋಪಿಗೆ ಇಬ್ಬರು ಗಂಡುಮಕ್ಕಳು ಇದ್ದಾರೆ. ಅವರ ಹೆಸರು ಚಿರಾಗ್ ಮತ್ತು ಸಮರ್ಥ್. ನನ್ನ ಹಾಗೂ ಆರೋಪಿಯ ನಡುವೆ 2022 ನೇ ಇಸವಿಯಲ್ಲಿ ನಿವೇಶನದ ಸಂಬಂಧ ವ್ಯವಹಾರ ಆಗಿದೆ. ಸದರಿ ನಿವೇಶನದ ಇ-ಸ್ವತ್ತು ಸಂಖ್ಯೆ ಮತ್ತು ವಿಸ್ತೀರ್ಣ ನನಗೆ ಈಗ ನೆನಪಿಲ್ಲ. ಸದರಿ ನಿವೇಶನ ಆರೋಪಿ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಇದೆ. ಆರೋಪಿ ಮತ್ತು ಅವರ ಮಕ್ಕಳು ನನಗೆ ದಿ.13.09.2022 ರಂದು ಸದರಿ ನಿವೇಶನ ಸಂಬಂಧ ನನಗೆ ಕರಾರು ಪತ್ರ ಬರೆದುಕೊಟ್ಟಿದ್ದಾರೆ. ಒಂದು ವರ್ಷದ ವಾಹಿದೆಯೊಳಗೆ ಕ್ರಯಪತ್ರ ಬರೆದುಕೊಡುತ್ತೇವೆ ಎಂದು ಆರೋಪಿ ಮತ್ತು ಅವರ ಮಕ್ಕಳು ಒಪ್ಪಿದ್ದರು.

ಒಟ್ಟು ರೂ.15,40,000/- ಗಳಿಗೆ ಕರಾರುಪತ್ರ ಮಾಡಿಕೊಂಡಿದ್ದೇವೆ. ಆ ಹಣದ ಪೈಕಿ ರೂ.10,00,000/- ಹಣವನ್ನು ಮುಂಗಡವಾಗಿ ಆರೋಪಿಗೆ ಕೊಟ್ಟಿದ್ದೇನೆ. ಸದರಿ ರೂ.10,00,000/- ಪೈಕಿ ರೂ.3,00,000/- ಹಣವನ್ನು ನಗದಾಗಿ ಮತ್ತು ರೂ.7,00,000/- ಹಣವನ್ನು ಚೆಕ್ ಮೂಲಕ ಪಾವತಿಸಿದ್ದೇನೆ. ಈ ವಿಚಾರವನ್ನು ನೋಟೀಸು ಮತ್ತು ದೂರಿನಲ್ಲಿ ನಮೂದಿಸಿಲ್ಲ. ಆರೋಪಿಯ ಹೆಸರಿಗೆ ಚೆಕ್ ಗಳನ್ನು ಕೊಟ್ಟಿದ್ದು, ಅವು ಮೂಡಿಗೆರೆ ಶಾಖೆಯ ಬ್ಯಾಂಕ್ ಆಫ್ ಬರೋಡಾ ಮತ್ತು ICICI ಬ್ಯಾಂಕಿನದ್ದಾಗಿಬಹುದು. ಸದರಿ ಚೆಕ್ ಗಳ ಮೂಲಕ ಆರೋಪಿಗೆ ಎಷ್ಟು ಹಣ ಪಾವತಿಸಿದ್ದೇನೆಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ಕರಾರುಪತ್ರ ಮಾಡಿಕೊಂಡ ದಿನಾಂಕದಂದೇ ಆರೋಪಿಯಿಂದ ನಾನು ಚೆಕ್ ಗಳನ್ನು ಪಡೆದಿಲ್ಲ. ವಾಹಿದೆಯೊಳಗೆ ಕ್ರಯಪತ್ರ ಮಾಡಿಕೊಡಬೇಕು ಎಂದು ನಾನು ಆರೋಪಿಗೆ ನೋಟೀಸು ಕೊಟ್ಟಿದ್ದೆ. ಸದರಿ ನೋಟೀಸನ್ನು ಹಾಜರುಪಡಿಸಿದ್ದೇನೆ. ದಿ.30.11.2023 ರಂದು ಸದರಿ ನೋಟೀಸನ್ನು ಆರೋಪಿ ಮತ್ತು ಅವರ ಮಕ್ಕಳಿಗೆ ಕೊಡಿಸಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.